


### ಚಳವಳಿಗಳ ಸಂಚಲನ

‘ಜಯಹೇ ಚಳವಳಿಗಳ ನಾಡೇ...’ (ನ. 21, ಆನಂದ್ ಜಿ.) ಲೇಖನ ವಿಚಾರಪೂರಿತವಾಗಿದೆ. ಕರ್ನಾಟಕ ಏಕೀಕರಣದ ಹೋರಾಟದಲ್ಲಿ ‘ನಾನು ಕನ್ನಡಿಗ, ಕರ್ನಾಟಕ ನನ್ನದು’, ‘ಸಿರಿಗನ್ನಡಂ ಗೆಲ್ಗೆ, ತಾಯ್‌ಗನ್ನಡಂ ಬಾಳ್ಗೆ’ಯಂಥ ಘೋಷವಾಕ್ಯಗಳು ಕನ್ನಡಿಗರಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿದ್ದವು. 60ರ ದಶಕದಲ್ಲಿ ನೆರೆರಾಜ್ಯದ ಆಕ್ರಮಣದಿಂದ ಕರ್ನಾಟಕವನ್ನು ರಕ್ಷಿಸಿದ ಅನಕೃ, ಮ. ರಾಮಮೂರ್ತಿ, ನಾಡಿಗೇರ ಕೃಷ್ಣರಾಯರು... ಇನ್ನೂ ಅನೇಕ ಮಹನೀಯರು ಪ್ರಾತಃಸ್ಮರಣೀಯರು.

—ಪ್ರಭಾಪ್ರಸಾದ್, ಬೆಂಗಳೂರು

**ಹಳಿ**

ಚಳವಳಿಗಳು ಪ್ರಜಾಪ್ರಭುತ್ವದ ಜೀವಾಳ. ಅವುಗಳ (ಅಸ್ತವ್ಯಸ್ತ) ಹಳಿಗಳ ಮೇಲೆಯೇ ಸಾಗಬೇಕು ಸಾರ್ವಜನಿಕ ಜೀವನ! ಹೆಚ್ಚಲಿ ಚಳವಳಿಗಳ ಸಂತಾನ (ಹಾಗೂ ಬಳುವಳಿ).

—ಸಿಪಿಕೆ

### ಕಾಗದದಲ್ಲೇ ಉಳಿದ ಪ್ರಯತ್ನಗಳು

ಕನ್ನಡ ಭಾಷೆ ಕುರಿತ ಕಾಳಜಿಯ ಈ ಲೇಖನ, ಎಲ್ಲರಿಗೂ ನಮ್ಮ ಭಾಷೆಯ ಪಾರಮ್ಯ ತಿಳಿಸುವಲ್ಲಿ ಸಫಲವಾಗಿದೆ. ಆದರೆ ಸರ್ಕಾರಗಳು ಭಾಷೆ ಕುರಿತು ಪರಿಚಯಿಸುವ ಹತ್ತು ಹಲವು ಪ್ರಯತ್ನಗಳು ಕಾಗದದಲ್ಲೇ ಉಳಿಯುತ್ತವೆ. ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಂಸ್ಕೃತಿ ಇಲಾಖೆ ಮುಂತಾದವುಗಳ ಚಟುವಟಿಕೆ ಸೀಮಿತವಾಗಿದೆ. ಅದೇ ರೀತಿ ಕನ್ನಡ ಹೋರಾಟಗಾರರ ಸಂಘಗಳ ಚಟುವಟಿಕೆಗಳು ಒಂದು ಚೌಕಟ್ಟಿನಲ್ಲಿ ಬಂಧಿತವಾಗಿದೆ ಎಂದು ನನ್ನ ಅಭಿಪ್ರಾಯ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

### ಬಾಪೂ ಸರಳತೆಗೆ ಸಾಕ್ಷಿ

‘ಬಾಪೂ ನೆನಪಿನ ವಾರ್ಧಾ ಆಶ್ರಮ’ (ನ. 21, ನಿರಂಜನ ವಾನಳ್ಳಿ) ಓದಿದೆ. ಸಾಮಾನ್ಯವಾಗಿ ಮಹಾತ್ಮ ಗಾಂಧೀಜಿ ಅವರ ಸಬರಮತಿ ಆಶ್ರಮದ ಬಗ್ಗೆ ಹೆಚ್ಚಿನವರಿಗೆ ತಿಳಿದಿದೆ. ವಾರ್ಧಾ ಬಗ್ಗೆ ಅಷ್ಟಾಗಿ ತಿಳಿದಿರುವುದಿಲ್ಲ. ಗಾಂಧೀಜಿಯವರು ಹತ್ತು ವರ್ಷಗಳ ಕಾಲ ಇದ್ದ ಈ ಆಶ್ರಮ ಗಾಂಧೀಜಿಯವರ ಸರಳತೆಗೆ ಸಾಕ್ಷಿಯಂತಿದೆ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

### ಪರಿಪೂರ್ಣ ಮಾಹಿತಿ ಅಗತ್ಯವಿತ್ತು

‘ಅಂಚೆ ವ್ಯವಸ್ಥೆಯ ಸುಧಾರಕ ಗುರುನಾಥ ಬೇವೂರ್’ (ನ. 21, ಜಗನ್ನಾಥ ಪ್ರಕಾಶ್ ಎನ್.) ಲೇಖನ ಚೆನ್ನಾಗಿದೆ. ಬೇವೂರ್ ಅವರ ಹಿರಿಯ ಮಗ ಮೇಜರ್ ಮಾಧವರಾವ್ ಬೇವೂರ್, ಎರಡನೇ ಮಹಾಯುದ್ಧದಲ್ಲಿ ಹುತಾತ್ಮರಾದರು. ಎರಡನೆಯ ಮಗ ಗೋಪಾಲ ಬೇವೂರ್ ಭಾರತದ ಮಹಾದಂಡನಾಯಕರಾಗಿದ್ದು, ಎನ್‌ಸಿಸಿಯ ಪ್ರಥಮ ನಿರ್ದೇಶಕರಾಗಿದ್ದರು. ಈ ಎರಡೂ ಸಂಗತಿಗಳನ್ನು ಸ್ಮರಿಸಿಕೊಂಡಿದ್ದರೆ ಲೇಖನ ಪರಿಪೂರ್ಣವಾಗುತ್ತಿತ್ತು.

—ಅಶೋಕ ಸಜ್ಜನ (ಬೇವೂರ), ಬಾಗಲಕೋಟೆ

### ಅಮ್ಮ-ಮಗುವಿನ ಭಾವಲೋಕ

‘ನಂಟು–ನಿಘಂಟು’ (ನ. 14), ತಾಯಿ ಹಾಗೂ ಕಂದಮ್ಮನ ಕರುಳು– ಹೃದಯದ ಭಾಷೆ ಕುರಿತ ಲೇಖನ ತುಂಬಾ ಚೆನ್ನಾಗಿತ್ತು. ಅಮ್ಮ ಮಗುವಿನ ಈ ಭಾವಲೋಕದ ಪರಿಮಳ ಸಂಗ್ರಹಯೋಗ್ಯ.

—ಎನ್. ಗೋಪಾಲರಾವ್, ಬೆಂಗಳೂರು

### ಅರ್ಥಪೂರ್ಣ, ವರ್ಣರಂಜಿತ ಕಲೆ

‘ಕನಕನ ಕಂಡೀರಾ’ (ನ. 21, ದಸ್ತಗೀರಸಾಬ್ ದಿನ್ನಿ) ಚಿತ್ರಪಟ ಲೇಖನದ ಮೂಲಕ ದಾಸ ಸಾಹಿತ್ಯದ ಒಳಹರಿವು ಹೇಗೆಂದು, ದಾಸ ಸಾಹಿತ್ಯ ಮೂಢನಂಬಿಕೆ ಹೋಗಲಾಡಿಸುವುದರ ಜೊತೆಗೆ ಸಂಗೀತ ಕಲೆ ಮತ್ತು ಚಳವಳಿಯ ರೂಪ ಒಳಗೊಂಡಿತ್ತು ಎನ್ನುವುದನ್ನು ತಿಳಿಸಿಕೊಟ್ಟ ಬರಹ ಬಹಳ ಅರ್ಥಪೂರ್ಣ ಎನಿಸಿತು. ಎಲ್ಲ ಚಿತ್ರಗಳು ಕೂಡ ವರ್ಣರಂಜಿತವಾಗಿವೆ.

—ಸವಿತಾ ಮುದ್ಗಲ್, ಬಳ್ಳಾರಿ



### ಸಾಹಿತ್ಯ-ಕಲೆಯ ಸಮ್ಮಿಲನ

ಕನಕದಾಸರ ಬದುಕಿನ ಹಲವು ಪ್ರಸಂಗಗಳು, ಅವರ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡ ಚಿಂತನೆಗಳನ್ನು ಕಲಾಕೃತಿಗಳ ಮೂಲಕ ಅನಾವರಣಗೊಳಿಸಿರುವ ಕಲಾವಿದರು ಹಾಗೂ ವಿಶಿಷ್ಟವಾದ ಭಾಷಾ ಶೈಲಿಯಲ್ಲಿ ಪ್ರಸ್ತುತಪಡಿಸಿದ ಲೇಖಕರು ಶ್ಲಾಘನಾರ್ಹರು.

—ಎಸ್.ವಿ. ನಾಯಕ್ ರಾಣಿ ಧಾರವಾಡ ಕಿನ್ನರ್

### ಮಾಹಿತಿಪೂರ್ಣ ‘ಮರಗಳ ಕಥೆ’

‘ಮೋಹಕ ಮಂಜೊಟ್ಟಿ’ (ನ. 21, ವಿನು ಗಂಗೆ) ಲೇಖನ ಮಾಹಿತಿಪೂರ್ಣವಾಗಿದೆ. 1970–72ರ ಕಾಲದಲ್ಲಿ ಮಂಜೊಟ್ಟಿ ಮರವನ್ನು ನಾನು ಕೋಲಾರದ ಪ್ರವಾಸಿ ಮಂದಿರದಲ್ಲಿ ನೋಡಿದ್ದೆ. ಇತ್ತೀಚೆಗೆ ಅರಿಶಿನಮಕ್ಕಿಯ ಪಕ್ಕದ ಊರು ಬಂಡಿ ಹೊಳೆಯಲ್ಲಿ ಎತ್ತರವಾಗಿ ಬೆಳೆದಿದ್ದ ಮರಗಳನ್ನು ಕಂಡೆ. ನಾನೂ ಒಂದಷ್ಟು ಬೀಜ ತಂದು ಹಾಕಿದೆ. ಗಿಡ ಬಂದಿಲ್ಲ. ಸಸಿಗಳನ್ನೇ ತರಬೇಕೆಂದಿರುವೆ. ವಿನು ಗಂಗೆಯವರ ‘ಮರಗಳ ಕಥೆ’ ಚೆನ್ನಾಗಿ ಮೂಡಿಬರುತ್ತಿದೆ.

—ವಿ. ಪದ್ಮಕುಮಾರಿ, ಚಿತ್ರದುರ್ಗ



### ಬೋನ್ಸಾಯ್ ಆಗಿ ಬೆಳೆಸುವಾಸೆ

ನನ್ನ ಸಂಗ್ರಹದಲ್ಲಿದ್ದ ಮಂಜೊಟ್ಟಿ ಬೀಜ ನೆಟ್ಟು ಎರಡು ಗಿಡ ಬೆಳೆಸಿದ್ದೇನೆ. ಮರವಾಗಿ ಬೆಳೆಸುವಷ್ಟು ಸ್ಥಳಾವಕಾಶವಿಲ್ಲದ್ದರಿಂದ ಕುಂಡದಲ್ಲಿ ಬೋನ್ಸಾಯ್ ಗಿಡವಾಗಿ ಬೆಳೆಸುವಾಸೆ.

—ನಳಿನಿ ಬಿ.ಎಸ್.

### ಅಚ್ಚರಿಯಾಯಿತು

ಮಂಜೊಟ್ಟಿ ಕುರಿತ ಲೇಖನದಲ್ಲಿ ಚಿನ್ನ ತೂಗಲು ಮಂಜೊಟ್ಟಿ ಬೀಜಗಳನ್ನು ಬಳಸುತ್ತಿದ್ದರೆಂಬ ವಿಷಯ ಓದಿ ಅಚ್ಚರಿಯಾಯಿತು. ನಾನು ಮಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾಗ, ಕುಡುಪು ಶ್ರೀ ಅನಂತಪದ್ಮನಾಭ ಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ಮಂಜೊಟ್ಟಿ ಮರ ನೋಡಿದ್ದೆ. ಪ್ರಸ್ತುತ ನಾವು ವಾಸಿಸುತ್ತಿರುವ ಸಂಡೂರಿನ ಸ್ಕಂದಪುರ ಬಡಾವಣೆಯಲ್ಲಿಯೂ ಒಂದು ಮಂಜೊಟ್ಟಿ ಮರವಿದೆ. ಬೀಜಗಳನ್ನು ಸಂಗ್ರಹಿಸಿಟ್ಟಿದ್ದೇನೆ.

—ಜಿ. ನಾಗೇಂದ್ರ ಕಾವೂರು, ಸಂಡೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in